1767

ತಾರೀಖು 29ನೆ ನವಂಬರ್ 1904.

ನಂ. ರೆ. 4720—ಲ್ಯಾ. ರೆ. 239—04–4, ಮೈಸೂರ ಸರ್ವಿಸ್ ರೆಗ್ಯುಲೇರ್ಷಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪುರ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ|| ಸಿ. ರಾಮರಾಯರಿಗೆ ದಸರಾ ರಜಾ ದಿನಗಳೊಂದಿಗೆ 1904ನೆ ಅಕ್ಟೋಬರ್ 28ನೆ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಕೋಲಾರ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ|| ಕೆ. ಬಿ. ಶ್ರೀನಿವಾಸಯ್ಯಂಗಾರ್ರು, ತಮ್ಮ ಕೆಲಸದೊಂದಿಗೆ, ಮೆ|| ರಾಮರಾಯರು ರಜಾದಲ್ಲಿದ್ದ ಕಾಲದಲ್ಲಿ ಚಿಕ್ಕಬಳ್ಳಾಪುರ ಡಿವೀಜನಿನ ಚಾರ್ಜಿನಲ್ಲಿದ್ದರು.

ಹುಕುಂ ಬವೋಜೇಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಟೆರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಕ್ಷನ್ಸ್.

ತಾರೀಖು 24ನೆ ನವಂಬರ್ 1904.

ನಂ. 1270—6965, ಮೆ|| ಜೆ. ಜೆ. ವ್ಹೈಟ್ಲಯವರು ಮಾಹೆ ಮಜಕೂರು 12ನೆ ತಾರೀಖಿನಾರಭ್ಯ 15 ತಿಂಗಳ ಒಟ್ಟು ರಜಾವ ಮೇಲೆ ಹೊರಟಿರುವದ್ದರಿಂದ ವಾರೀಕಣಿವೆ ಕೆಲಸಗಳ ಸೂಪರಿಟೆಂಡಿಂಗ್ ಇಂಜನಿಯರಾದ ಮೆ|| ಸಿ. ಟಿ. ದಳಾಲ್‌ಯವರು ಪೂರ್ವ ಸರ್ಕಲಿನ ಸೂಪರಿಟೆಂಡಿಂಗ್ ಇಂಜನಿಯರಾಗಿ ಹೊಕರಲ್ಯಾಡಲ್ಪಟ್ಟಿರುತ್ತಾರೆ.

II. ಮೆ|| ಸಿ. ಟಿ. ದಳಾಲ್ ಯವರು ಮಾಹೆ ಮಜಕೂರು 17ನೆ ತಾರೀಖಿನ ಮಧ್ಯಾಹ್ನಾತ್ಪರ ಪೂರ್ವ ಸರ್ಕಲಿನ ಸೂಪರಿಟೆಂಡಿಂಗ್ ಇಂಜನಿಯರವರ ಆಫೀಸಿನ ಚಾರ್ಜನ್ನು ವಹಿಸಿರುತ್ತಾರೆ.

ಹುಕುಂ ಬವೋಜೇಬ್,
ಡಬ್ಲ್ಯೂ. ಮೆಕಹರ್ಡೀ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನಮೆಂಟ್ ಸೆಕ್ರಟೆರಿ.